**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**

**ದಿ:07-02-2026**

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಈ ಈ ಡಿ ವಕೀಲರಿಂದ**

ನಾನು ಎದುರುದಾರರ ಜೊತೆ ಇದ್ದಾಗ ಅವರು ಲಾರಿ ಚಾಲಕರಾಗಿದ್ದರು ಮತ್ತು ಟಿಂಬರ್ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಲಾರಿ ಚಾಲಕನಿದ್ದಾಗ ವಾರಗಟ್ಟಲೆ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಮದುವೆಯಾದ ನಂತರ ನಾನು ಮತ್ತು ಎದುರುದಾರರು 6 ತಿಂಗಳಿಂದ 1 ವರ್ಷ ಚೆನ್ನಾಗಿದ್ದೇವು. 1 ವರ್ಷ ಆದ ನಂತರ ಎದುರುದಾರರು ನನ್ನನ್ನು ಹೊಡೆದು ತವರು ಮನೆಗೆ ಕಳುಹಿಸುತ್ತಿದ್ದರು. ಪುನಃ ಎದುರುದಾರರ ತಂದೆ ತಾಯಿ ಬಂದು ಕರೆದಿದ್ದುದರಿಂದ ನಾನು ವಾಪಸ್ಸು ಬಂದಿರುತ್ತೇನೆ. 11 ವರ್ಷಗಳಲ್ಲಿ 10 ಬಾರಿಗಿಂತ ಜಾಸ್ತಿ ತವರು ಮನೆಗೆ ಬಂದಿರುತ್ತೇನೆ. ಎದುರುದಾರರಿಗೆ ಕರುಳು ಊತ ಮತ್ತು ಕಿಡ್ನಿ ಸಮಸ್ಯೆ ಇರಲಿಲ್ಲ. ನಾನು ಅವರ ಜೊತೆ ಇದ್ದಾಗ ಅವರಿಗೆ ಯಾವುದೇ ಸಮಸ್ಯೆ ಇರಲಿಲ್ಲ ಮತ್ತು ಆಸ್ಪತ್ರೆಗೆ ಹೋಗಿರಲಿಲ್ಲ. ಈಗಲೂ ಅವರಿಗೆ ಸಮಸ್ಯೆ ಇರುವುದಿಲ್ಲ. ನಾನು ಈಗ ನನ್ನ ತಾಯಿಯ ಮನೆಯಲ್ಲಿ ವಾಸವಿರುತ್ತೇನೆ. ನಾನು, ನನ್ನ ತಂದೆ ತಾಯಿ, ನನ್ನ ಮಗ ವಾಸವಿರುತ್ತೇನೆ.

ನಾನು ಪಿ ಯು ಸಿ ಓದಿ ನರ್ಸಿಂಗ್ ಮಾಡಿರುತ್ತೇನೆ. ನಾನು ಯಾವುದೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿಲ್ಲ. ನನ್ನ ಆರೋಗ್ಯ ಸಮಸ್ಯೆ ಇರುವುದರಿಂದ ನಾನು ಕೆಲಸ ಮಾಡುತ್ತಿರುವುದಿಲ್ಲ. ನನ್ನ ತಾಯಿ ಕೂಲಿ ಕೆಲಸ ಮಾಡುತ್ತಾರೆ. ತಂದೆ ಮನೆಯಲ್ಲಿ ಇರುತ್ತಾರೆ. ಎದುರುದಾರರ ತಂದೆ ತಾಯಿಗೆ ಆರೋಗ್ಯ ಸಮಸ್ಯೆ ಇದೆ ಎಂದರೆ ಸರಿಯಲ್ಲ. ಅವರು ಸಹ ಕೆಲಸಕ್ಕೆ ಹೋಗುತ್ತಾರೆ. ಎದುರುದಾರರು ನನಗೆ ತುಂಬಾ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡುತ್ತಾರೆ. ನಾನು ಚೆನ್ನಾಗಿಲ್ಲ ಎಂದು ಹಿಯಾಳಿಸಿರುತ್ತಾರೆ. ಎದುರುದಾರರ ಮನೆಯ ಅಕ್ಕಪಕ್ಕ ಮನೆಗಳು ಇದೆ. ಶ್ರೀನಿವಾಸ ರವರ ಮನೆ ನಮ್ಮ ಮನೆಯ ಎಡಭಾಗದಲ್ಲಿ ಇದೆ. ಅವರಿಗೆ ಹೆಂಡತಿ ಮಕ್ಕಳು ಇರುತ್ತಾರೆ. ಅವರಿಗೆ 10 ವರ್ಷದ ಹೆಣ್ಣು ಮಗಳು ಮತ್ತು 2 ಚಿಕ್ಕ ಮಕ್ಕಳು ಇರುತ್ತಾರೆ. ಶ್ರೀನಿವಾಸ ರವರು ಎದುರುದಾರರ ಸಂಬಂಧಿಕರು ಇರುತ್ತಾರೆ. ನಾನು ಎದುರುದಾರರ ಮನೆಯಲ್ಲಿ ಇರುವಾಗ ಶ್ರೀನಿವಾಸ ರವರು ಬರುತ್ತಿರಲಿಲ್ಲ. ಎದುರುದಾರರು ಮತ್ತು ಶ್ರೀನಿವಾಸ ರವರ ನಡುವೆ ಮಾತುಕತೆ ಇತ್ತು. ಒಂದು ಬಾರಿ ಗಲಾಟೆಯಾಗಿತ್ತು.

ಶ್ರೀನಿವಾಸ ರವರು ಸಕಲೇಶಪುರ ಗ್ರಾಮಾಂತರ ಠಾಣೆಯಲ್ಲಿ ಎದುರುದಾರರು ಮತ್ತು ಅವರ ತಂದೆಯ ವಿರುದ್ದ ದಿಃ 30.04.2021 ರಲ್ಲಿ ಒಂದು ದೂರು ನೀಡಿದ್ದರು ಎಂದರೆ ಸರಿ. ಸದರಿ ಪ್ರಕರಣ ನ್ಯಾಯಾಲಯದಲ್ಲಿ ಚಾಲ್ತಿ ಇತ್ತು ಎಂದರೆ ಸರಿ. ಶ್ರೀನಿವಾಸ ರವರು ದೂರು ನೀಡಿದ ದಿನ

ನಾನು ಠಾಣೆಯಲ್ಲಿ ಇದ್ದೆ. ನನ್ನ ಜೊತೆ ನನ್ನ ತಂದೆ ತಾಯಿ ಮತ್ತು ಇತರರು 6-7 ಜನ ಇದ್ದರು. ಸದರಿ ಗಲಾಟೆ ಸಮಯದಲ್ಲಿ ನಾನು ಇದ್ದೆ. ಶ್ರೀನಿವಾಸ ಮತ್ತು ಅವರ ಹೆಂಡತಿ ಆಶಾ ರವರು ಸಂಘದಲ್ಲಿ ಹಣ ಕಟ್ಟಿರುವುದಿಲ್ಲ ಆ ಸಂಬಂಧ ಗಲಾಟೆಯಾಗಿರುತ್ತದೆ. ಸಂಘದಲ್ಲಿ 12 ಜನ ಇದ್ದೆವು. ಠಾಣೆಯಲ್ಲಿ ಅದೇ ವಿಚಾರವಾಗಿ ತನಿಖೆ ಮಾಡಿರುತ್ತಾರೆ. ಸಂಘದ ವಿಚಾರವಾಗಿ ಗಲಾಟೆಯಾಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ನಾನು ಸಂಜೆ 7 ಗಂಟೆಯವರೆಗೆ ಮನೆಯಲ್ಲಿ ಇದ್ದು ಆನಂತರ ನಾನು ನನ್ನ ತವರು ಮನೆಗೆ ಹೋಗಿರುತ್ತೇನೆ ಎಂದರೆ ಸರಿ. ಎದುರುದಾರರು ಮಕ್ಕಳನ್ನು ಕಳುಹಿಸದೇ ಇರುವ ಕಾರಣ ಅವರನ್ನು ಬಿಟ್ಟು ಹೋಗಿದ್ದೆ.

ನಾನು ಮತ್ತು ಶ್ರೀನಿವಾಸ ರವರು ಫೋನ್ ನಲ್ಲಿ ಬಹಳ ಮಾತಾನಾಡುತ್ತಿದ್ದು ಮತ್ತು ಮೆಸೇಜ್ ಗಳನ್ನು ಕಳುಹಿಸುತ್ತಿದ್ದರಿಂದ ಶ್ರೀನಿವಾಸ ರವರ ಹೆಂಡತಿ ಆಶಾ ರವರು ನನ್ನ ಅತ್ತೆ ಮಾವ ರವರಿಗೆ ಹೇಳಿದ್ದರಿಂದ ಸದರಿ ದಿನ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಎದುರುದಾರರ ಲಾರಿ ಕೆಲಸಕ್ಕೆ ಹೋಗಿ ಬಂದ ನಂತರ ಎದುರುದಾರರ ಚಿಕ್ಕಪ್ಪನ ಮಗ ಅರವಿಂದ್ ರವರು ಎದದುರುದಾರರಿಗೆ ಸದರಿ ವಿಚಾರ ತಿಳಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ವಿಚಾರವನ್ನು ಎದುರುದಾರರು ನನ್ನನ್ನು ಕೇಳಿದಾಗ ಗಲಾಟೆಯಾಗಿರುತ್ತದೆ ಎಂದರೆ ಸರಿ. ಆದ್ದರಿಂದ ನಾನು ಸಂಜೆ 7 ಗಂಟೆಗೆ ಮನೆ ಬಿಟ್ಟು ಹೋಗಿರುತ್ತೇನೆಂದರೆ ಸಾಕ್ಷಿ ಎದುರುದಾರರು ಹೊಡೆದಿರುತ್ತಾರೆಂದು ನುಡಿಯುತ್ತಾರೆ. ಆನಂತರ ಎದುರುದಾರರು ಶ್ರೀನಿವಾಸ ರವರನ್ನು ಕೇಳಿದ ನಂತರ ತಮ್ಮ ವಿರುದ್ದ ದೂರು ನೀಡುತ್ತಾರೆಂಬ ಭಯದಲ್ಲಿ ನಾನು ಮತ್ತು ಶ್ರೀನಿವಾಸ ರವರು ಸೇರಿ ಎದುರುದಾರರು ಮತ್ತು ಅವರ ತಂದೆಯ ವಿರುದ್ದ ಶ್ರೀನಿವಾಸ ರವರು ದೂರು ನೀಡಿರುತ್ತಾರೆಂದರೆ ಸರಿಯಲ್ಲ.

ಮದುವೆಯಾದ 1 ವರ್ಷದ ನಂತರ ಎದುರುದಾರರು ಹೊಡೆಯುತ್ತಿದ್ದಾಗ ನಾನು ಪೊಲೀಸ ದೂರು ನೀಡಿರುತ್ತೇನೆ. ಸದರಿ ದೂರುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಾನು ಶ್ರೀನಿವಾಸ ರವರ ಮೊಬೈಲ್ ಗೆ ಮೆಸೇಜ್ ಅಥವಾ ಫೋನ್ ಮಾಡಿರುವುದಿಲ್ಲ. ನನ್ನ ಮಕ್ಕಳು ಎದುರುದಾರರ ಮನೆಯಲ್ಲಿ 15 ದಿನಗಳು ಮಾತ್ರ ಇದ್ದರು. ಮದುವೆಯಾದ ಸಮಯದಲ್ಲಿ ನಾನು, ನನ್ನ ಅತ್ತೆ, ಮಾವ ಮತ್ತು ಅವರ ಅಕ್ಕ ಇದ್ದೆವು. ಮದುವೆಯಾದ 3-6 ತಿಂಗಳ ನಂತರ ನಾನು ಮತ್ತು ಎದುರುದಾರರು, ನಮ್ಮ ಅತ್ತೆ ಮಾವ ರವರಿಂದ ಪ್ರತ್ಯೇಕವಾಗಿ ವಾಸ ಇದ್ದೆವು. ನಾವು ಇದ್ದ ಮನೆ ಸಹ ನನ್ನ ಮಾವನ ಮನೆಯಾಗಿತ್ತು ಎಂದರೆ ಸರಿ. ನನ್ನ ಮಾವ ಪಕ್ಕದಲ್ಲಿ ಹೊಸದಾಗಿ ಜನತಾ ಮನೆ ಮಾಡಿದ್ದರು ಎಂದರೆ ಸರಿ. ಸದರಿ ಜನತಾ ಮನೆಯಲ್ಲಿ ನಾನು ಮತ್ತು ಎದುರುದಾರರು ವಾಸವಿದ್ದೇವು ಎಂದರೆ ಸರಿ.

ನಾನು ಸಂಘಗಳಲ್ಲಿ ಪಡೆದ ಸಾಲವನ್ನು ಎದುರುದಾರರು ಬಳಸಿಕೊಂಡಿರುತ್ತಾರೆ. ಸಂಘದಲ್ಲಿ ಪಡೆದ ಸಾಲವನ್ನು ನಾನೇ ಖರ್ಚು ಮಾಡಿರುತ್ತೇನೆಂದರೆ ಸರಿಯಲ್ಲ. ಕ್ರಿ ಮಿಸ್ 158/2022 ಪ್ರಕರಣ

ದಾಖಲು ಮಾಡಿದ ನಂತರ 3 ತಿಂಗಳ ನಂತರ ನಾನು ಪುನಃ ಎದುರುದಾರರ ಮನೆಗೆ ಬಂದಿರುತ್ತೇನೆ. ಸುಮಾರು 6 ತಿಂಗಳ ಕಾಲ ವಾಸವಿದ್ದೆ. ಆನಂತರ ಎದುರುದಾರರು ಹೊಡೆದು ತವರು ಮನೆಗೆ ಕಳುಹಿಸಿರುತ್ತಾರೆ. ಎದುರುದಾರರು ಅಪಘಾತ ಮಾಡಿದ ನಂತರ ನಾನೇ ಅವರಿಗೆ ಹಣವನ್ನು ನೀಡಿರುತ್ತೇನೆ. ಮಕ್ಕಳು ನನ್ನ ಜೊತೆ ಇದ್ದರು. ಮಕ್ಕಳು ಅವರ ಶಾಲಾ ಶಿಕ್ಷಕಿ ಮತ್ತು ನನ್ನ ಅತ್ತೆಯ ಪೋನ್ ನಿಂದ ಕರೆ ಮಾಡುತ್ತಿದ್ದರು. ಎದುರುದಾರರಿಗೆ ಬೇರೆಯವರ ಜೊತೆ ಸಂಬಂಧ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ದಾಖಲಾತಿಯನ್ನು ಹಾಜರುಪಡಿಸಬಲ್ಲೆ. ಎದುರುದಾರರಿಗೆ ಆರೋಗ್ಯ ಸಮಸ್ಯೆ ಇದ್ದುದರಿಂದ ನಾನೇ ಅವರಿಂದ ದೂರು ಇರುತ್ತೇನೆಂದರೆ ಸರಿಯಲ್ಲ. ಎದುರುದಾರರಿಂದ ವೈವಾಹಿಕ ಜೀವನದಲ್ಲಿ ಸಂತೋಷ ಇರುವುದಿಲ್ಲ ಎಂದು ಹೇಳಿ ನಾನೇ ಅವರಿಂದ ದೂರ ಹೋಗಿರುತ್ತೇನೆಂದರೆ ಸರಿಯಲ್ಲ. ನಾನೇ ಸ್ವತಃ ಮಕ್ಕಳನ್ನು ಬಿಟ್ಟು ಹೋಗಿರುತ್ತೇನೆಂದರೆ ಸರಿಯಲ್ಲ. ಈಗಲೂ ಸಹ ಎದುರುದಾರರು ನೋಡಿಕೊಳ್ಳಲು ತಯಾರಿದ್ದು ಹೋಗುತ್ತಿರಾ ಎಂದರೆ ಸಾಕ್ಷಿ ಅವರು ಪ್ರತಿಬಾರಿ ಈರೀತಿ ಹೇಳಿ ತುಂಬಾ ತೊಂದರೆ ನೀಡುತ್ತಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರು ಈವರೆಗೂ ನನಗೆ ದೈಹಿಕ ಮತ್ತು ಮಾನಸಿಕ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಅರ್ಜಿ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಸಹಿ/-**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಸಕಲೇಶಪುರ**